ಅ.ದಾ.ನಂ.354/2010
ಪಿ.ಡಬ್ಲೂ:3

**<u>ಸಾಕ್ಷಿಯನ್ನು ಇಂದು ದಿನಾಂಕಃ 5.12.2025 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು</u>**
**<u>ಮುಂದುವರೆದ ಪಾಟೀ ಸವಾಲುಃ ಶ್ರೀ.ಎನ್ ಬಿ ಕೆ, ವಕೀಲರಿಂದ ಪ್ರತಿವಾದಿ ಪರವಾಗಿ</u>**

7. ದಾವಾ ಆಸ್ತಿಗಳ ಕುರಿತು ವಿಭಾಗವಾಗಿ ಡ.ನಂ.25/2008-09 ರಂತೆ ಆಗಿರುತ್ತದೆ ಎಂದರೆ ಸಾಕ್ಷಿಯು ನನ್ನ ತಾಯಿಯ ಸಹಿಯನ್ನು ಬೇರೆ ಉದ್ದೇಶಕ್ಕೆ ಪಡೆದು ಡ.ನಂ.25/2008-09ರ ಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ನನ್ನ ತಾಯಿಯ ಸಹಿಯನ್ನು ಪಗಾರ ಮಾಡಿಸುವ ಉದ್ದೇಶಕ್ಕಾಗಿ ಪಡೆದಿದ್ದರು. ನನ್ನ ತಂದೆಯು 1975ರಲ್ಲಿ ಮೃತ ಪಟ್ಟಿರುತ್ತಾರೆ. ಸದರಿ ವಾಟ್ನಿ ಪ್ರಕಾರ ದಾಖಲಾತಿ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ವಾಟ್ನಿ ಪ್ರಕಾರ ನನ್ನ ತಾಯಿಗೆ 2 ಎಕರೆ ಜಮೀನು ಬಂದಿರುತ್ತದೆ ಎಂದರೆ ಸರಿ. ನಿಪಿ-1ರ ಪಹಣಿ ಪತ್ರಿಕೆಯಲ್ಲಿ ನನ್ನ ತಾಯಿಯ ಹೆಸರು ನಮೂದು ಇರುತ್ತದೆ ಎಂದರೆ ಸರಿ.

8. ವಾಟ್ನಿ ಪ್ರಕಾರ ಪೋಡಿ ಆಗಿರುತ್ತದೆ ಎಂದರೆ ಸರಿ. ಪೋಡಿ ಆಗಿರುವುದನ್ನು ನಾನು ಪ್ರಶ್ನಿಸಿರುವುದಿಲ್ಲ ಎಂದರೆ ಸಾಕ್ಷಿಯು ಪಹಣಿ ಪತ್ರಿಕೆ ಬಂದ ನಂತರ ನಮಗೆ ಗೊತ್ತಾಗಿರುತ್ತದೆ ಎಂದು ಹೇಳುತ್ತಾರೆ. ನಿಡಿ-4ರಂತೆ ನನ್ನ ಅಜ್ಜನು ವಿಶೇಷ ತಹಶೀಲ್ದಾರವರಿಗೆ ಅರ್ಜಿಕೊಟ್ಟಿರುತ್ತಾರೆ ಎಂದರೆ ಸರಿ. ನಿಡಿ-4ರ ದಾಖಲಾತಿಯಲ್ಲಿ ದಿಃ05.6.2008 ಎಂದು ನಮೂದು ಇರುತ್ತದೆ ಎಂದರೆ ಸರಿ. ನಮ್ಮ ತಾಯಿಗೆ ಬಂದ 2 ಎಕರೆ ಜಮೀನು ನಾವು ಸ್ವಾಧೀನಾನುಭವದಲ್ಲಿ ಇರುತ್ತೇನೆ ಎಂದರೆ ಸರಿ. ನಿಡಿ-5ರ ಪ್ರಕಾರ ಪೋಡಿ ಅಗಿರುತ್ತದೆ ಎಂದರೆ ಸರಿ. ನಿಡಿ-5ರ ದಾಖಲಾತಿಗೆ ನನ್ನ ತಾಯಿ ಸಹಿ ಮಾಡಿರುತ್ತಾರೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಿಡಿ-5ರ ದಾಖಲಾತಿಯ ಮೇಲೆ ನನ್ನ ತಾಯಿ ಸಹಿ ಇದ್ದರೂ ಕೂಡಾ ನನ್ನ

ತಾಯಿಯ ಸಹಿ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ-7ರ ಪ್ರಕಾರ ವಂದಾಲ ಗ್ರಾಮದ ಜಮೀನು ವಾಟ್ನಿ ಪತ್ರ ಎಂದರೆ ಸಾಕ್ಷಿಯು ನನಗೆ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. ನಿಡಿ-7ರ ಪ್ರಕಾರ ನನ್ನ ತಾಯಿಗೆ 2 ಎಕರೆ, 8 ಎಕರೆ 16 ಗುಂಟೆ ವಾಸಪ್ಪನ ಹೆಸರಿಗೆ ಮತ್ತು 7 ಎಕರೆ 23 ಗುಂಟೆ ರಮೇಶನ ಹಿಸ್ಸೆಗೆ ಹೋಗಿರುತ್ತದೆ ಎಂದರೆ ಸಾಕ್ಷಿಯು ನನ್ನ ತಾಯಿಗೆ 2 ಎಕರೆ ಮಾತ್ರ ಬಂದಿರುವುದು ಗೊತ್ತು ಎಂದು ಹೇಳುತ್ತಾರೆ. ನಿಡಿ-7ರ ದಾಖಲಾತಿಗೆ ನನ್ನ ತಾಯಿ, ವಾಸಪ್ಪ ಮತ್ತು ರಮೇಶ ಎಲ್ಲರೂ ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಡಿ-7ರ ದಾಖಲಾತಿಯಲ್ಲಿರುವ ನನ್ನ ತಾಯಿಯ ಸಹಿ ಹೌದು ಅಥವಾ ಅಲ್ಲವೋ ಎಂಬುದು ನನಗೆ ಗೊತ್ತಿಲ್ಲ. ನಮಗೆ 2 ಎಕರೆ ಜಮೀನು ಬಂದಿರುತ್ತದೆ ಎಂಬ ಕಾರಣದಿಂದ ನಿಡಿ-7ರ ದಾಖಲಾತಿಯ ಮೇಲೆ ಇರುವ ಸಹಿ ನನ್ನ ತಾಯಿಯದು ಅಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ-7ರ ದಾಖಲಾತಿಗೆ ಪಂಚರುಗಳು ಸಹ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

9. ನನಗೆ 2008 ರಲ್ಲಿ 40 ವಯಸ್ಸು ಆಗಿತ್ತು ಎಂದರೆ ಸರಿ. ನನಗೆ ನಿಡಿ-7ರ ದಾಖಲಾತಿಯ ಬಗ್ಗೆ ಮಾಹಿತಿ ಇದ್ದರೂ ಕೂಡಾ ಮಾಹಿತಿ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ-10ರ ದಾಖಲಾತಿಗೂ ಸಹ ನನ್ನ ತಾಯಿಯ ಸಹಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿಡಿ-10ರ ದಾಖಲಾತಿಗೆ ವಾಸಪ್ಪ ಮತ್ತು ರಮೇಶರವರ ಸಹಿಗಳು ಇರುತ್ತವೆ ಎಂದರೆ ನನಗೆ ಗೊತ್ತಿಲ್ಲ. ನಿಡಿ-10ರ ದಾಖಲಾತಿಗೆ ಪಂಚರುಗಳು ಸಹ ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಡಿ-10ರ ದಾಖಲಾತಿಗೆ ಪಂಚರಾಗಿ ಸಹಿ ಮಾಡಿರುವವರು ನಮ್ಮ ಊರಿನವರು ಎಂದರೆ ಸರಿ.

10 ಸಾಕ್ಷಿಗೆ ವಾದಿ ಪರ ವಕೀಲರು ಸಲ್ಲಿಸಿರುವ ವಕಾಲತ್ ಪತ್ರವನ್ನು ತೋರಿಸಿ ಅದರಲ್ಲಿರುವ ಸಹಿ ಯಾರದು ಎಂದು ಸಾಕ್ಷಿಯು ಅದರಲ್ಲಿರುವ

ತಿಪ್ಪವ್ವ ಹು ಕೊಳ್ಳಿ ಎಂದು ಸಹಿ ಮಾಡಿರುವುದು ಎಂದು ನನ್ನ ತಾಯಿಯದು ಎಂದು ಹೇಳುತ್ತಾರೆ. ವಕಾಲತ್ ನಲ್ಲಿರುವ ಸಹಿ ಮತ್ತು ನಿಡಿ-5 ರಲ್ಲಿರುವ ನನ್ನ ತಾಯಿಯ ಸಹಿ ಎರಡು ಒಂದೇ ಎಂದರೆ ಸಾಕ್ಷಿಯು ವಕಾಲತ್ ಸಹಿ ಮಾತ್ರ ನನ್ನ ತಾಯಿಯದು ಎಂದು ಹೇಳುತ್ತಾರೆ. ವಕಾಲತ್ ನಲ್ಲಿರುವ ಸಹಿ ಮತ್ತು ನಿಡಿ-7 ರಲ್ಲಿರುವ ನನ್ನ ತಾಯಿಯ ಸಹಿ ಎರಡು ಒಂದೇ ಎಂದರೆ ಸಾಕ್ಷಿಯು ವಕಾಲತ್ ಸಹಿ ಮಾತ್ರ ನನ್ನ ತಾಯಿಯದು ಎಂದು ಹೇಳುತ್ತಾರೆ. ವಕಾಲತ್ ನಲ್ಲಿರುವ ಸಹಿ ಮತ್ತು ನಿಡಿ-10 ರಲ್ಲಿರುವ ನನ್ನ ತಾಯಿಯ ಸಹಿ ಎರಡು ಒಂದೇ ಎಂದರೆ ಸಾಕ್ಷಿಯು ವಕಾಲತ್ ಸಹಿ ಮಾತ್ರ ನನ್ನ ತಾಯಿಯದು ಎಂದು ಹೇಳುತ್ತಾರೆ. ನನಗೆ ಎಲ್ಲಾ ದಾಖಲಾತಿಗಳ ಬಗ್ಗೆ ಮಾಹಿತಿ ಇದ್ದರೂ ಕೂಡಾ ಮಾಹಿತಿ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

11 ವಾಟ್ನಿಯಾದ ನಂತರ ದಾವಾ ಆಸ್ತಿಗಳು ಏಕತ್ರ ಕುಟುಂಬದಲ್ಲಿ ಉಳದಿಲ್ಲ ಎಂದರೆ ಸರಿಯಲ್ಲ. ನಿಪಿ-2 ರ ಮೃತ್ಯ ಪತ್ರವು ಖೊಟ್ಟಿಯಾಗಿರುತ್ತದೆ ಎಂದರೆ ಸರಿಯಲ್ಲ. ಮೃತ್ಯ ಪತ್ರವನ್ನು ಎಲ್ಲಿ ಮತ್ತು ಯಾವ ತಾರೀಖಿನಂದು ಮಾಡಿರುತ್ತಾರೆ ಎಂದರೆ ಸಾಕ್ಷಿಯ ವಿಜಯಪೂರದಲ್ಲಿ ನನ್ನ ಅಜ್ಜನು ಮಾಡಿರುತ್ತಾನೆ. ಯಾವ ತಾರೀಖಿನಂದು ಮೃತ್ಯ ಪತ್ರ ಆಗಿರುತ್ತದೆ ಎಂಬುದು ನನಗೆ ಗೊತ್ತಿಲ್ಲ. ಸದರಿ ಮೃತ್ಯ ಪತ್ರಕ್ಕೆ ಯಾರು ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ಆ ಸಮಯದಲ್ಲಿ ನಾನು ಇರಲಿಲ್ಲ ಎಂದು ಹೇಳುತ್ತಾರೆ. ಮೃತ್ಯ ಪತ್ರವನ್ನು ಬಾಂಡ್ ರೈಟರ್ ರವರು ಬರೆದಿರುತ್ತಾರೆ. ಬಾಂಡ್ ರೈಟರ್ ಹೆಸರು ಕುಲಕರ್ಣಿ ಎಂದು ಇರುತ್ತದೆ. ನಿಪಿ-2 ರ ಮೃತ್ಯ ಪತ್ರವನ್ನು ಸಬ್ ರಿಜಿಸ್ಟರ್ ಕಛೇರಿಯಲ್ಲಿ ಬರೆದಿರುತ್ತಾರೆ.

**ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಾವಕಾಶ ಕೊರಿದ್ದು ಸಮಯಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

**ಹೆಚ್ಚುವರಿ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,**
**ಬಸವನ ಬಾಗೇವಾಡಿ.**